ನವಪರಿಮಳಗಳಿಂದ ಸಿಂಗರಿಸಿದ ಚಿತ್ರಾಂಗದೆಯ ಕಳೇಬರವಿದ್ದ ಚಟ್ಟದ ಬಳಿ ಪಾರ್ಥ ಮತ್ತು ಪಾರ್ಥಜರಿಬ್ಬರೂ ಕಾಲು ನಡಿಗೆಯಿಂದ ಇತರ ಮಿತ್ರ ಸಾಮಾಂತರ ಗುಂಪಿನಲ್ಲಿ ನಡೆದರು. ಸೈನಿಕರ ಸೊಂಟದಲ್ಲಿ ಬಂಗಾರ ಖಚಿತ ಸುಂದರ ಕತ್ತಿಯ ಒರೆಯಿತ್ತು. ಅವರ ಮುಷ್ಟಿಯಲ್ಲಿ ರಾಜಗೌರವ ಸೂಚಿಸುವ ಝುಗಮಗಿಸುವ ಒರೆಯೊಳಗಿರುವ ಖಡ್ಗವಿತ್ತು. ಹೀಗಿರುವ ಉಭಯ ಸೈನಿಕರು ಐಕ್ಯಮತದಲ್ಲಿ, ಶಿಸ್ತುಬದ್ಧವಾಗಿ ಛಂದೋಗಮನದಿಂದ ಹೆಜ್ಜೆ ಹಾಕಿ ನಡೆದರು.

ಸಮುದ್ರ ದಡದಲ್ಲಿಯ ಚಿತೆಯು ಚಂದನ ಶ್ರೀಗಂಧದ ತುಂಡುಗಳ ಇಂಧನದಿಂದ, ಕಸ್ತೂರಿ ಕರ್ಪೂರ ಸಜ್ಜರಸ (ಒಂದು ಬಗೆಯ ಅರಗಿನಂತಹ ಅಂಟು) ಲೋಬಾನ ಯಕ್ಷಕರ್ದಮವೆಂಬ ಸುಗಂಧ ಲೇಪನದಿಂದ, ಬಕುಳ ಮಲ್ಲಿಗೆ ಜಾಜಿ ಮೊಲ್ಲೆ ಸಂಪಿಗೆ ಕಮಳ ದೇವಕುಸುಮಗಳಿಂದ ಕಂಪಿಡಿದು ಸೊಂಪಿಡಿದಿತ್ತು. ಅದು ಮರ್ತ್ಯದಿಂದ ಸ್ವರ್ಗಕ್ಕೆ ಕೊಂಡೊಯ್ಯುವ ಒಂದು ಬೃಂದಾರಕ ವಿಮಾನವೆನ್ನುವಂತಿತ್ತು. ಜನ ಒಟ್ಟಾಗಿ ಬಂದು ಕಡಲಿನ ಅಂಚಿನಲ್ಲಿ ನೆರೆದರು. ಅದು ಮತ್ತೊಂದು ಮಹಾ ಸಮುದ್ರವೆನ್ನುವಂತೆ ಗೋಚರಿಸುತ್ತಿತ್ತು. ಅತ್ಯುತ್ತಮವಾದ ಘನಸಾರ ಎನ್ನುವ ಕಾಶ್ಮೀರ ಮೂಲದ ಲೇಪನದಿಂದ, ಶುಭ್ರಶ್ವೇತ ಪೀತಾಂಬರದ ಉಡುಪಿನಿಂದ ಶೋಭಿಸುವ, ನವರತ್ನಮಯ ಹೇಮದಾಭರಣಗಳಿಂದ ಅಲಂಕರಿಸಿದ, ಉಚಿತ ಪರಿಕರ್ಮಾಂಗಗಳಿಂದ ಶುದ್ಧಿ ಸಂಸ್ಕಾರಗೊಂಡ ಶವವನ್ನು ಚಿತೆಯ ಮೇಲೇರಿಸಿದರು.

ಮೃದುವಾದ್ಯ ವೀಣಾರವದೊಂದಿಗೆ ಜನರ ಆಕ್ರಂದನ ಬೆರೆತು ಹೊರಹೊಮ್ಮಿತು. ಮಾರುತನು ಗಂಧಭಾರಕ್ಕೆ ಕುಸಿದು ನಿಟ್ಟುಸಿರು ಬಿಡುತ್ತಿರಲು, ಸಮುದ್ರ ಪತಿಯು ತರಂಗ ಸಂಕುಲ ನಾದದಿಂದ ಮೊರೆಯುತ್ತಿದ್ದನು. ನಭವು ಸೋನೆಮಳೆಯ ನೆವದಿಂದ ಬಿಡದೆ ಕಂಬನಿ ಸೂಸುತ್ತಿದ್ದಿತು. ಆಗ ಸರ್ವಶುಚಿ ಸಪ್ತಾರ್ಚಿ ಅಗ್ನಿಯ ಸೂಡನ್ನು ಹೊತ್ತಿಸಲು, ಹೊಗೆ ಸೂಸಿ ಕಿಡಿಗೆದರಿ, ನೆತ್ತರು ಉರಿ ನಾಲಗೆಯ ತಾಂಡವದಂತೆ ಇಂಧನ ಸುಗಂಧ ಚಿತೆಯನ್ನು ನೊಣೆದು ನೆಕ್ಕಿತು. ಧಗಧಗಿಸುತ್ತ ಆಪೋಷಣ ತೆಗೆದುಕೊಂಡಿತು.

**ಮಣಿಪುರ ಮನದ ಮಹಾ ಸ್ಮೃತಿ ಸುಧಾಶಿವರೂಪಿ**

ಚಿತಾ ಚಿತ್ರಭಾನಿನ ಮಧ್ಯೆ ಶೋಭಿಸುವ ಇಂದ್ರ ಧನುಸ್ಸಿನಂತಹ ಉತ್ತಮ ವಸ್ತ್ರದ ಚಿತ್ರಾಂಗದೆಯ ಸುಂದರ ದೇವಮೂರ್ತಿ ಪುಷ್ಪಕ ವಿಮಾನ ಪೀಠದಲ್ಲಿರುವುದನ್ನು ಎಲ್ಲರೂ ಕನಸು ಕಂಡಂತೆ ಕಂಡರು. ನಂದನದ ದೇವಲೋಕದ ಪುಷ್ಪಹಾರವನ್ನು ಹಿಡಿದು ಅಮರ ಫಣಿವೇಣಿಯರು ಅಲ್ಲಿ ಸುರಗಾನವನ್ನು ಹಾಡುತ್ತಿದ್ದರು. ಜನರ ತೀವ್ರವಾದ ಉತ್ಸಾಹದ ಕೂಗಿನಲ್ಲಿ ನೋಡ ನೋಡುತ್ತಿದ್ದಂತೆ ಪುಷ್ಪಕ ವಿಮಾನವು ಆಗಸಕ್ಕೆ ಏರಿತು!

ಜ್ಞಾನವು ಅಜ್ಞಾನವನ್ನು ದಹಿಸುವಂತೆ ಅಗ್ನಿಯು ಕಾಯ ಮಾಯೆಯನ್ನು ಸುಟ್ಟಿತು. ಪ್ರೇಮ ಅಮೃತತತ್ವದಂತಿರುವ ನೊರೆ ನೊರೆಯ ಬೆಳ್ಳನೆಯ ಗೋವಿನ ಹಾಲನ್ನು ಕುಂಭ ಕುಂಭಗಳಲ್ಲಿ ತುಂಬಿ ಅಭಿಷೇಕವೆರೆದು ಅದನ್ನು ಕುಂದಿಸಿದರು.

ಅನಂತರ ಏಳುದಿನಗಳು ಹಗಲು ಇರುಳುಗಳಲ್ಲಿ ಅಲ್ಲಿ ಅಮೃತಶಿಲೆಯ ಚೈತ್ಯಾಲಯವು ಚಿತ್ರಾಂಗದೆಯ ಯಶಶ್ಚಿತ್ರ ಸುರತರುವಿನಂತೆ ಬೆಳೆಯಿತು. ಅದು ಚಳಿಯಿಂದ ಹೆಪ್ಪುಗಟ್ಟಿದ ಹಾಲ್ಗಡಲಿನ ಮಂಜುಗಡ್ಡೆಯನ್ನು ಕಡಿ ಕಡಿಯುತ್ತ, ಇಟ್ಟಿಗೆಯಾಗಿ ಜೋಡಿಸುತ್ತ ಕಲ್ಪನೆಯಲ್ಲಿ ಸವಿ ನೆನಪಿನ ಮನೆಯನ್ನು ಪ್ರೀತಿಯಿಂದ ನಿರ್ಮಿಸಿದಂತಿತ್ತು. ಆ ಸ್ಮಾರಕ ನಿಕೇತನ ಸ್ತೂಪವನ್ನು ಸಹಸ್ರ ಸಹಸ್ರ ಶಿಲ್ಪಿಗಳು ಎಡೆಬಿಡದೆ ಕಟ್ಟಿದರು!

ಆ ಮೂಕ ಶೋಕದ ಶಿಲೆಯ ಸಂಗೀತವು ನೆಲದ ಪ್ರೀತಿ ತಲೆಯೆತ್ತಿ ಸಗ್ಗನೀಲಿಗೆ ಮುತ್ತು ಕೊಡುವಂತಿತ್ತು! ಅದು ಮಣಿಪುರದ ಮನದ ಮಹಾ ಸ್ಮೃತಿ ಸುಧಾಶಿವರೂಪಿ ತಾನೆನ್ನುವಂತೆ ಶೋಭಿಸುತ್ತಿತ್ತು.

(ಮುಗಿಯಿತು)

ಪ್ರತಿಕ್ರಿಯಿಸಿ: feedback@sudha.co.in

# ಹೊಸ ಧಾರಾವಾಹಿ




**ಒಂದು ಹಳ್ಳಿ, ಎರಡು ತಿಂಗಳು!**

ಸರ್ಪಸುತ್ತನ್ನು ಗುಣಪಡಿಸಿಕೊಳ್ಳಲು ಊರಿಗೆ ಬಂದ ತರುಣ, ತನ್ನ ರೋಗವನ್ನು ಗುಣಪಡಿಸಿಕೊಂಡನೋ ಅಥವಾ ಊರಿಗೆ ರೋಗ ಅಂಟಿಸಿದನೋ?

ಎರಡು ತಿಂಗಳ ಅವಧಿಯಲ್ಲಿ ಒಂದು ಹಳ್ಳಿಯ ಚಹರೆಯನ್ನೇ ಬದಲಿಸುವ ಘಟನಾವಳಿಗಳ ರೋಚಕ ಕಾದಂಬರಿ 'ವೈರಸ್'. ಅಮೆರಿಕನ್ನಡಿಗನೊಬ್ಬ ತನ್ನ ಸರ್ಪಸುತ್ತಿಗೆ ಮದ್ದು ಹುಡುಕಿಕೊಂಡು ಕಾಡಿನ ನಡುವಿನ ತನ್ನ ತವರನ್ನು ಹುಡುಕಿಕೊಂಡು ಬರುವುದರೊಂದಿಗೆ ಆರಂಭವಾಗುವ ಕಥೆ, ಅಭ್ಯಾಗತನ ಆಗಮನದೊಂದಿಗೆ ಊರಿನಲ್ಲಿ ಉಂಟಾಗುವ ಬದಲಾವಣೆಗಳನ್ನು ಸೂಕ್ಷ್ಮವಾಗಿ ಚಿತ್ರಿಸುತ್ತದೆ.



ಸುದರ್ಶನ ಮೊಗಸಾಲೆ ಅವರ ವಿಶಿಷ್ಟ ಕಾದಂಬರಿ 'ವೈರಸ್'

**ಮುಂದಿನವಾರ ಆರಂಭ**